**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು**

**ಸಿಸಿ . ನಂ. 2367/2022**

**ಫಿರ್ಯಾದಿ :** ಕಡೂರು ಪೊಲೀಸ್ ಠಾಣೆ

ವಿರುದ್ದ

**ಆರೋಪಿಗಳು :** ದೇವೇಂದ್ರಪ್ಪ ಬಿನ್ ನಂಜುಂಡಪ್ಪ,
ವಯಸ್ಸು ಸುಮಾರು 49 ವರ್ಷ, ವ್ಯವಸಾಯ,
ವಾಸಃ ದೇವರಹಳ್ಳಿ ಗ್ರಾಮ, ಮತ್ತಿಘಟ್ಟ ಅಂಚೆ,
ಕಡೂರು ತಾಲ್ಲೂಕು.

**ದೋಷಾರೋಪಣೆ**

ಶ್ರೀ. ಹೆಚ್.ಪಿ. ಮೋಹನ್‌ಕುಮಾರ್ ಬಿ.ಎಸ್ಸಿ , ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿತರಾದ ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ.

ಮೊದಲನೇಯದಾಗಿ, ದಿನಾಂಕ 14.09.2021 ರಂದು ಮಧ್ಯಾಹ್ನ 04.00 ಗಂಟೆ ಸಮಯದಲ್ಲಿ ಕಡೂರು ಪೋಲಿಸ್ ಠಾಣಾ ಸರಹದ್ದಿನ ಕಡೂರು ತಾಲ್ಲೂಕು ದೇವರಹಳ್ಳಿ ಗ್ರಾಮದಲ್ಲಿ ಚಾಸಾ.1 ಮತ್ತು ಚಾಸಾ.2 ರವರು ಹಸುಗಳಿಗೆ ಹುಲ್ಲನ್ನು ಕೊಯ್ದುಕೊಂಡು ಬರಲು ಸ್ಪ್ಲೆಂಡರ್ ಬೈಕ್ ಸಂಖ್ಯೆ ಕೆಎ 18/ಜೆ-3215 ರಲ್ಲಿ ಹೋಗಿ ಜಮೀನಿನಲ್ಲಿ ಹುಲ್ಲನ್ನು ಕುಯ್ಯುತ್ತಿರುವಾಗ, ಆರೋಪಿತರಾದ ನೀವು ಹಳೆಯ ದ್ವೇಷದ ಹಿನ್ನಲೆಯಲ್ಲಿ ಬೈಕನ್ನು ಕಾಲಿನಿಂದ ದೂಕಿ ಬೀಳಿಸಿ, ಬೈಕಿನ ಮುಂದಿನ ಮಾಸ್ಕ್ ಮತ್ತು ಇಂಡಿಕೇಟರನ್ನು ಹೊಡೆದು ಹಾಕಿ ಜಖಂಗೊಳಿಸಿ ಸುಮಾರು ರೂ.800/- ಗಳ ನಷ್ಟ ಉಂಟುಮಾಡಿರುತ್ತೀರಿ. ಆದ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 427** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ 1 ರವರ ಬೈಕನ್ನು ಬೀಳಿಸಿ, ಜಖಂಗೊಳಿಸಿ, ಚಾಸಾ.1

ರವರ ಶಾಂತಿಭಂಗಕ್ಕೆ ಪ್ರೇರೇಪಣೆ ನೀಡುವ ರೀತಿಯಲ್ಲಿ ಸೂಳೇಮಗನೆ, ಬೋಳಿಮಗನೆ ಎಂದು ಅವಾಚ್ಯವಾಗಿ ಬೈದು ನಿಂದಿಸಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 504** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ 1 ರವರ ಬೈಕನ್ನು ಬೀಳಿಸಿ, ಜಖಂಗೊಳಿಸಿ, ಚಾಸಾ.1 ರವರಿಗೆ ಅವಾಚ್ಯವಾಗಿ ಬೈದು, ಕೈಯಿಂದ ಚಾಸಾ.1 ರವರ ಮೈಕೈಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಸ್ವ ಇಚ್ಛಾ ಗಾಯವನ್ನುಂಟು ಮಾಡಿರುವ ಕಾರಣ, ಆರೋಪಿಗಳಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ 1 ರವರ ಬೈಕನ್ನು ಬೀಳಿಸಿ, ಜಖಂಗೊಳಿಸಿ, ಚಾಸಾ.1 ರವರಿಗೆ ಅವಾಚ್ಯವಾಗಿ ಬೈದು, ಕೋಲಿನಿಂದ ಚಾಸಾ.1 ಬಲಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಸ್ವ ಇಚ್ಛಾ ಗಾಯವನ್ನುಂಟು ಮಾಡಿರುವ ಕಾರಣ, ಆರೋಪಿಗಳಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ, ಆರೋಪಿಗಳಾದ ನೀವುಗಳು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ 19.12.2022.

-ಸಹಿ-

**(ಹೆಚ್.ಪಿ ಮೋಹನ್‌ಕುಮಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಕಡೂರು**

**ಸಿಸಿ . ನಂ. 2367/2022**

ಫಿರ್ಯಾದಿ : ಕಡೂರು ಪೊಲೀಸ್ ಠಾಣೆ

ವಿರುದ್ದ

| | | |
|---|---|---|
| ಆರೋಪಿಯ ಹೆಸರು | : | ದೇವೆಂದ್ರಪ್ಪ |
| ತಂದೆಯ ಹೆಸರು | : | ನಂಜುಂಡಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ದೇವರಹಳ್ಳಿ ಗ್ರಾಮ, ಮತ್ತಿಘಟ್ಟ ಅಂಚೆ, ಕಡೂರು ತಾಲ್ಲೂಕು. |

**ಆರೋಪಣೆ**

ಪ್ರಶ್ನೆ : 1. ಆಪಾದನೆಗಳ ಸಾರಾಂಶ ನಿಮಗೆ ಅರ್ಥವಾಯಿತೇ?
ಉತ್ತರ :

ಪ್ರಶ್ನೆ : 2. ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?
ಉತ್ತರ :

ದಿನಾಂಕ : 19.12.2022 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆತನು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.

**(ಹೆಚ್.ಪಿ ಮೋಹನ್‌ಕುಮಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**

ಆರೋಪಿಯ ಸಹಿ